ಓ.ಎಸ್. ನಂ.72/2022 ಪಿಡಬ್ಲ್ಯೂ-1

(ಇಂದು ದಿನಾಂಕಃ 26-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ :**

1. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ 44 ಅದರ ಒಟ್ಟು ವಿಸ್ತೀರ್ಣ 7 ಎಕರೆ 18 ಗುಂಟೆ ಇರುತ್ತದೆ. ಸರ್ವೆ ನಂಬರ 44 ಅದರ ಒಟ್ಟು ವಿಸ್ತೀರ್ಣ 15 ಎಕರೆ ಚಿಲ್ಲರೆ ಗುಂಟೆ ಇದೆ ಎಂದರೆ ಸಾಕ್ಷಿ ಅದರ ವಿಸ್ತೀರ್ಣ 7 ಎಕರೆ 18 ಗುಂಟೆ ಇರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಕ್ಕೆ ಸಂಬಂಧ ಪಟ್ಟಂತೆ ಪಹಣಿಯನ್ನು ನಾನು ನೋಡಿರುತ್ತೇನೆ. ಸರ್ವೆ ನಂಬರ 44 ರಲ್ಲಿ ಎರಡು ಹಿಸ್ಸೆಗಳಿವೆ. ಹಿಸ್ಸಾ ಒಂದರಲ್ಲಿ ಎಷ್ಟು ಎಕರೆ , ಎಷ್ಟು ಗುಂಟೆ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಹಳೆಯ ಪಹಣಿಯಲ್ಲಿ ಎರಡು ಹಿಸ್ಸೆ ಇದೆ ಎಂದು ಹೇಳುತ್ತಾರೆ. ಹಿಸ್ಸಾ ಒಂದರಲ್ಲಿ 3 ಎಕರೆ 29 ಗುಂಟೆ ಇತ್ತು ಮತ್ತು ಹಿಸ್ಸಾ ಎರಡರಲ್ಲಿ 3 ಎಕರೆ 29

ಗುಂಟೆ ಇತ್ತು. ಹಿಸ್ಸಾ ಒಂದರಲ್ಲಿ 3 ಎಕರೆ 29 ಗುಂಟೆ ಇತ್ತು ಮತ್ತು ಹಿಸ್ಸಾ ಎರಡರಲ್ಲಿ 3 ಎಕರೆ 29 ಗುಂಟೆ ಇತ್ತು ಎಂದು ತೋರಿಸಲು ಪಹಣಿಯನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿ ಹಳೆಯ ಪಹಣಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಹಿಸ್ಸಾ ಒಂದರಲ್ಲಿ ಯಾರ ಹೆಸರು ಇದೆ ಮತ್ತು ಹಿಸ್ಸಾ ಎರಡರಲ್ಲಿ ಯಾರ ಹೆಸರು ಇದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವ ಹಿಸ್ಸೆಗೆ ಸಂಬಂಧಪಟ್ಟಂತೆ ದಾವೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಸಿದ್ದಪ್ಪಾರವರಿಗೆ 3 ಎಕರೆ 29 ಗುಂಟೆ ಮತ್ತು ಶಿವಪ್ಪರವರ ಹೆಸರಿಗೆ 3 ಎಕರೆ 29 ಗುಂಟೆ ಇತ್ತು ಎಂದು ನಾನು ಹೇಳುತ್ತಿದ್ದು ಅದರ ಪಹಣಿಯನ್ನು ಯಾವಾಗ ನೋಡಿರುತ್ತೇನೆ ಎಂದರೆ ಸಾಕ್ಷಿ 5-6 ವರ್ಷಗಳ ಹಿಂದೆ ನೋಡಿರುತ್ತೇನೆ ಎಂದು ಹೇಳುತ್ತಾರೆ. ಸಿದ್ದಪ್ಪ ಮತ್ತು ಶಿವಪ್ಪಾರವರ ಹೆಸರಿಗೆ ಪ್ರತ್ಯೇಕವಾಗಿ ಇದ್ದ ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಸಿದ್ದಪ್ಪ ಮತ್ತು ಶಿವಪ್ಪಾರವರನ್ನು ನೋಡಿಲ್ಲ. ಸಿದ್ದಪ್ಪ ಹೈಬತಿ ಮತ್ತು ಶಿವಪ್ಪಾ ಹೈಬತಿಯವರ ಹೆಂಡತಿ ಮಕ್ಕಳು ಮತ್ತು ಅವರ ವಾರಸುದಾರರು ಊರಲ್ಲಿ ಇದ್ದಾರೆ. ಸಿದ್ದಪ್ಪಾರವರಿಗೆ 3 ಎಕರೆ 29 ಗುಂಟೆ ಮತ್ತು ಶಿವಪ್ಪರವರ ಹೆಸರಿಗೆ 3 ಎಕರೆ 29 ಗುಂಟೆ ಇತ್ತು ಎಂದು ನಾನು ಹೇಳುತ್ತಿದ್ದು ಅವರು ವಿಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಅವರಿಬ್ಬರು ಯಾವ ಇಸವಿಯಲ್ಲಿ ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ಮತ್ತು ಶಿವಪ್ಪರವರಿಗೆ ಪ್ರತ್ಯೇಕವಾಗಿ 3 ಎಕರೆ 29 ಗುಂಟೆ ವಿಭಾಗದಿಂದ ಬಂದಿದೆ ಎಂದು ನಾನು ಹೇಳುತ್ತಿದ್ದು ಅದರ ಬಗ್ಗೆ ದಾಖಲೆಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಅವರಿಬ್ಬರು ಪಾಲ ಮಾಡಿಕೊಂಡಿದ್ದ ಬಗ್ಗೆ ಪಾಲುಗಾರಿಕೆ ಪತ್ರ ನೋಡಿರುತ್ತೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳುತ್ತಾರೆ. ಸಿದ್ದಪ್ಪ ಮತ್ತು ಶಿವಪ್ಪರವರಿಗೆ ಪ್ರತ್ಯೇಕವಾಗಿ 3 ಎಕರೆ 29 ಗುಂಟೆ ವಿಭಾಗದಿಂದ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ. ಸಿದ್ದಪ್ಪ ಮತ್ತು ಶಿವಪ್ಪರವರಿಗೆ ಪ್ರತ್ಯೇಕವಾಗಿ 3 ಎಕರೆ 29 ಗುಂಟೆ ವಿಭಾಗದಿಂದ ಬಂದಿದೆ ಎಂದು ನಾನು ಹೇಳುತ್ತಿದ್ದು ಅದರ ಬಗ್ಗೆ ಪ್ರತ್ಯೇಕವಾಗಿ ಪಹಣಿ ಆಗಿದೆ ಯಾ ಎಂದರೆ ಸಾಕ್ಷಿ ಜಂಟಿ ಪಹಣಿ ಇರುತ್ತದೆ ಎಂದು ಹೇಳುತ್ತಾರೆ. 1954 ರಿಂದ 1966 ರ ವರೆಗೆ ಸರ್ವೆ ನಂಬರ 44 ರಲ್ಲಿ ಸಿದ್ದಪ್ಪ ಮತ್ತು ಶಿವಪ್ಪರವರ ಹೆಸರಿಗೆ ಜಂಟಿ ಪಹಣಿ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನಿನ ಪಹಣಿಯಲ್ಲಿ ಕಾಲಂ ನಂಬರ 12 ಸ್ವಾಧೀನತೆಯ ಕಾಲಂನಲ್ಲಿ ರಾಮಣ್ಣ ತಂದೆ ಯಲ್ಲಪ್ಪಾ ಎಂದು ನಮೂದು ಇದೆ ಎಂದರೆ ಸರಿ.

2. ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ಹೇಗೆ ಬಂದಿತು ಎಂದರೆ ಸಾಕ್ಷಿ ನನ್ನ ಮುತ್ಯಾ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನನ್ನ ಅಜ್ಜ ಯಾವಾಗ ಖರೀದಿಸಿದರು

ಎಂದರೆ ಸಾಕ್ಷಿ 50 ವರ್ಷವಾಗಿದೆ ಆದರೆ ನನಗೆ ಇಸವಿ ನೆನಪಿಲ್ಲ ಎಂದು ಹೇಳುತ್ತಾರೆ. ಇದರ ಬಗ್ಗೆ ದಾಖಲೆಯನ್ನು ನಾನು ನೋಡಿಲ್ಲ. ದಾವಾ ಆಸ್ತಿಯ ಖರೀದಿ ಮಾಡಿರುವ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ನನ್ನ ಅಜ್ಜ ಯಾವತ್ತು ಖರೀದಿಸಿಲ್ಲ ನಾನು ಸಲ್ಲಿಸಿದ ನಿ.ಪಿ-4 ನ್ನು ಖೊಟ್ಟಿಯಾಗಿ ಸೃಷ್ಠಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ-4 ರ ಸ್ಟ್ಯಾಂಪ ಪೇಪರ ಎಷ್ಟು ಮೊತ್ತದ್ದು ಇತ್ತು ಎಂದರ ಸಾಕ್ಷಿ ಆಗ ಸ್ಟ್ಯಾಂಪ ಪೇಪರ ಇರಲಿಲ್ಲ ಎಂದು ಹೇಳುತ್ತಾರೆ. ನಿ.ಪಿ-4 ರಲ್ಲಿ ನಾನು ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಿರುವ ಜಮೀನಿನ ಸರ್ವೆ ನಂಬರ ವಿಸ್ತೀರ್ಣ ಮತ್ತು ಚರ್ತುರ ಸೀಮೆ ನಮುದು ಇದೆಯಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ-4 ರಲ್ಲಿ ಮಾರಾಟ ಮಾಡಿರುತ್ತೇನೆ ಎಂದು ಹೇಳುತ್ತಿರುವ ಜಮೀನಿನ ಚರ್ತುರ ಸೀಮೆ ಬರೆದಿಲ್ಲ ಎಂದರೆ ಸಾಕ್ಷಿ ನನ್ನ ಹಿರಿಯರ ಕೈಯಲ್ಲಿ ಆಗಿದೆ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ-4 ರಲ್ಲಿ 4 ಜನ ಸಹಿ ಮಾಡಿರುತ್ತಾರೆ. 4 ಜನ ಸಹಿ ಮಾಡಿರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 4 ಜನ ಸಹಿ ಮಾಡಿರುವ ದಾಖಲೆ ಯಾವ ಭಾಷೆಯಲ್ಲಿ ಇತ್ತು ಎಂದರೆ ಸಾಕ್ಷಿ ನನಗೆ ಭಾಷೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ-4 ರಲ್ಲಿ ತರ್ಜುಮ ಮಾಡಿದ ದಾಖಲೆಯಲ್ಲಿ 5 ಜನ ಸಾಕ್ಷಿದಾರರ ಸಹಿ ಇದೆ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಅದರಲ್ಲಿ ಬರೆದಿರುವುದು ಸರಿ ಇದೆ ಎಂದು ಹೇಳುತ್ತಾರೆ. ನಿ.ಪಿ-4 ಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ. ನಿ.ಪಿ-4 ರಲ್ಲಿ ತರ್ಜುಮ ಮಾಡಿದ ದಾಖಲೆಯಲ್ಲಿ 3 ಜನ ಸಾಕ್ಷಿದಾರರ ಸಹಿ ಇದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಿ.ಪಿ-4 ರಲ್ಲಿ ನಾನು ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಿರುವ ಜಮೀನಿನ ಸರ್ವೆ ನಂಬರ ವಿಸ್ತೀರ್ಣ ಮತ್ತು ಚರ್ತುರ ಸೀಮೆ ನಮೂದು ಇಲ್ಲ ಆದ್ದರಿಂದ ಅದು ಅಪೂರ್ಣ ದಾಖಲೆ ಎಂದರೆ ಸಾಕ್ಷಿ ದಾಖಲೆ ಸರಿ ಇದೆ ಎಂದು ಹೇಳುತ್ತಾರೆ. ಶಿವಪ್ಪರವರು ಎಂದಿಗೂ ದಾವಾ ಆಸ್ತಿಯನ್ನು ಭೀಮು ತಂದೆ ಫೇಮೂರವರಿಗೆ ಯಾವತ್ತು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಿರಾಸ್ತಿಗಳು ರೂ.100/-ಕಿಂತ ಜಾಸ್ತಿ ಆಗಿದ್ದರೆ ಅದನ್ನು ನೊಂದಣಿ ಮಾಡಬೇಕಾಗುತ್ತದೆ ಆದ್ದರಿಂದ ಈಗ ರೂ.100/- ಮೌಲ್ಯ ತೋರಿಸಿ ಆ ದಾಖಲೆಯನ್ನು ಸೃಷ್ಠಿಸಿರುತ್ತೇನೆ ಎಂದರೆ ಸಾಕ್ಷಿ ಸರಿ ಅಂತಾ ಹೇಳಿ ನಂತರ ಅದು ಖೊಟ್ಟಿ ದಾಖಲೆ ಅಲ್ಲ ಎಂದು ಹೇಳುತ್ತಾರೆ. ನಾನು ಸಲ್ಲಿಸಿರುವ ನಿ.ಪಿ-1 ರಿಂದ 3 ದಾಖಲೆಗಳಲ್ಲಿ ಯಾವ ಸರ್ವೆ ನಂಬರಗೆ ಸಂಬಂಧ ಪಟ್ಟಿದ್ದು ಇದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಅದು ಸರ್ವೆ ನಂಬರ 44 ಕ್ಕೆ ಸಂಬಂಧಪಟ್ಟಿದ್ದು ಇದೆ ಎಂದು ಹೇಳುತ್ತಾರೆ. ನಿ.ಪಿ-1 ರಿಂದ 3 ದಾಖಲೆಗಳು ದಾವಾ ಆಸ್ತಿಗೆ ಸಂಬಂಧ ಪಟ್ಟ ದಾಖಲೆಗಳು

ಅಲ್ಲಾ ಎಂದರೆ ಸರಿಯಲ್ಲ. ನಿ.ಪಿ-1 ರಿಂದ 3 ದಾಖಲೆಗಳಲ್ಲಿ ಸರ್ವೆ ನಂಬರ 44 ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 44 ರಲ್ಲಿ ಒಟ್ಟು ಎಷ್ಟು ಜನ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ 3 ಎಕರೆ 20 ಗುಂಟೆ ನಾನು ಸಾಗುವಳಿ ಮಾಡುತ್ತಿದ್ದೇನೆ, ರಾಮಚಂದ್ರ, ಹರೀಶ್ಚಂದ್ರ, ಗನ್ನು ಮತ್ತು ಹೀರು ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ರಾಮಚಂದ್ರ, ಹರೀಶ್ಚಂದ್ರ, ಗನ್ನು ಮತ್ತು ಹೀರು ಜಂಟಿಯಾಗಿ 3 ಎಕರೆ 20 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ. ಕಳೆದ 30 ವರ್ಷಗಳಿಂದ ನಾನು ಆ ಜಮೀನಿಗೆ ಹೋಗುತ್ತಿದ್ದೇನೆ. ಸರ್ವೆ ನಂಬರ 44 ರಲ್ಲಿ ಉಳಿದ ಜಮೀನಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಮೊದಲು ರಾಮಣ್ಣ ತಂದೆ ಯಲಪ್ಪ ಮತ್ತು ಅವರ ಮಕ್ಕಳು ಮಾಡುತ್ತಿದ್ದರು ಈಗ 5-6 ವರ್ಷದಿಂದ ಅದು ಬೀಳು ಬಿದ್ದಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಲ್ಲಿ ರಾಮಣ್ಣ ತಂದೆ ಯಲಪ್ಪ ಮತ್ತು ಅವರ ಮಕ್ಕಳು ಮಾಡುತ್ತಿದ್ದರು ಜಮೀನು ಬೇರೆ ಮತ್ತು ನಾನು ರಾಮಚಂದ್ರ, ಹರೀಶ್ಚಂದ್ರ, ಗನ್ನು ಮತ್ತು ಹೀರು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದ ಜಮೀನು ಬೇರೆ ಇದೆ ಎಂದರೆ ಸರಿ. ರಾಮಣ್ಣ ತಂದೆ ಯಲಪ್ಪರವರಿಗೆ ಇಬ್ಬರು ಮಕ್ಕಳಿದ್ದು ಆ ಜಮೀನು ಅವರಿಗೆ ಹೇಗೆ ಬಂದಿದೆ ಎಂದರೆ ಸಾಕ್ಷಿ ಅವರು ಖರೀದಿಸಿರುವ ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಸದರಿ ಜಮೀನನ್ನು ಸಿದ್ದಪ್ಪ ಹೈಬತಿಯವರಿಂದ ಅವರು ಖರೀದಿ ಮಾಡಿರುತ್ತಾರೆ. ರಾಮಣ್ಣ ತಂದೆ ಯಲಪ್ಪರವರ ಮೊಮ್ಮಗ 2 ನೇ ಪ್ರತಿವಾದಿ ಎಂದರೆ ಸರಿ. 2 ನೇ ಪ್ರತಿವಾದಿ ಸ್ವಾಧೀನದಲ್ಲಿರುವ ಜಮೀನು ಅವರ ಹಿರಿಯರು ಇದ್ದ ಜಮೀನಿನ ಸ್ವಾಧೀನದಲ್ಲಿ 2 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ನಮ್ಮ ಜಮೀನಿನ ಪೂರ್ವಕ್ಕೆ ಹಣಮಂತಪ್ಪ ತಂದೆ ಭಂಡಪ್ಪ, ಪಶ್ಚಿಮಕ್ಕೆ ಘಟ್ಟ, ಉತ್ತರಕ್ಕೆ ಘಟ್ಟ, ದಕ್ಷಿಣಕ್ಕೆ ವಾರಿ ಇದೆ ಎಂದು ಹೇಳುತ್ತಾರೆ. ರಾಮಣ್ಣ ತಂದೆ ಯಲಪ್ಪರವರು ಸ್ವಾಧೀದಲ್ಲಿ ಇದ್ದ ಜಮೀನಿನ ಪೂರ್ವಕ್ಕೆ ರುಪಲಾ ನಾಯಕರವರ ಜಮೀನುಇದೆ ಎಂದರೆ ಸರಿ. ಪಶ್ಚಿಮಕ್ಕೆ ಘಟ್ಟ, ಮತ್ತು ನಾನು ಸ್ವಾಧೀನದಲ್ಲಿ ಇದ್ದ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ಘಟ್ಟ, ದಕ್ಷಿಣಕ್ಕೆ ಶಾಮರಾವ ಮತ್ತು ಭೀಮರಾವರವರ ಜಮೀನು ಇದೆ ಎಂದರೆ ಸರಿ.

3. ಸರ್ವೆ ನಂಬರ 44 ರ ಜಮೀನಿಗೆ ಸಂಬಂಧಪಟ್ಟಂತೆ ಸರ್ವೆ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ಹಿರಿಯರು ಮಾಡಿಸಿರಬಹುದು ನಾನು ಮಾಡಿಸಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸರ್ವೆ ಮಾಡಿದರೊ ಇಲ್ಲವೊ ಎಂದು ನಾನು ನನ್ನ ಹಿರಿಯರಿಗೆ ಕೇಳಿರುವುದಿಲ್ಲ. ಸರ್ವೆ ನಂಬರ 44 ರಲ್ಲಿ ಯಾವುದೇ ಭಾಗದಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 1954 ರಿಂದ

ಇಲ್ಲಿಯವರೆಗೆ ಸರ್ವೆ ನಂಬರ 44 ರಲ್ಲಿ ಯಾವುದೇ ಭಾಗದಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ನಮ್ಮ ಹತ್ತಿರ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಲ್ಲಿ 7 ಎಕರೆ 18 ಗುಂಟೆ ಜಮೀನಿನಲ್ಲಿ ಮೊದಲು ದಾಖಲೆಯಲ್ಲಿ ಶಿವಪ್ಪ ಹೈಬತಿ, ಅವರ ನಂತರ ರಾಮಣ್ಣ ತಂದೆ ಯಲ್ಲಪ್ಪಾ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ರಾಮಣ್ಣ ತಂದೆ ಯಲ್ಲಪ್ಪಾ ಆದ ನಂತರ ರಾಮಣ್ಣ ಅವರ ನಂತರ 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 44 ರ ಕಂದಾಯ ದಾಖಲೆಗಳು ಸಿದ್ದಪ್ಪರವರ ಹೆಸರಿನಲ್ಲಿ ಸುಮಾರು 45 ವರ್ಷದಿಂದ ಇದೆ ಎಂದರೆ ಸಾಕ್ಷಿ ಆ ದಾಖಲೆಗಳ ತಪ್ಪು ಇದೆ ಎಂದು ಹೇಳುತ್ತಾರೆ. ಸದರಿ ಸಿದ್ದಪ್ಪರವರ ಹೆಸರಿನಲ್ಲಿ ಇದ್ದ ದಾಖಲೆಗಳು ತಪ್ಪು ಇದೆ ಎಂದು ಅದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ. ಸಿದ್ದಪ್ಪನ ಹೆಸರಿಗೆ ಆದ ಎಷ್ಟು ವರ್ಷದ ನಂತರ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ 25 ವರ್ಷ ಆಗಿರಬಹುದು ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಲ್ಲಿ 7 ಎಕರೆ 18 ಗುಂಟೆ ಜಮೀನಿನಲ್ಲಿ ಪ್ರತಿವಾದಿ 1 ರವರು 2 ನೇ ಪ್ರತಿವಾದಿಗೆ ಸಂಬಂಧಪಟ್ಟ ಜಮೀನು ಇದೆ ಎಂದು ಅವರ ಹೆಸರಿಗೆ ನೊಂದಣಿ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ತಪ್ಪು ಇದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ನೊಂದಣಿ ಮಾಡಿಕೊಟ್ಟ ನಂತರ 2 ನೇ ಪ್ರತಿವಾದಿಯ ಹೆಸರಿಗೆ ಇದ್ದ ಬಗ್ಗೆ ನಾನು ಪ್ರಶ್ನಿಸಿರುತ್ತೇನೆ ಎಂದರೆ ಸಾಕ್ಷಿ ಅದಕ್ಕಿಂತ ಮೊದಲೇ ನಾನು ಪ್ರಶ್ನಿಸಿದ್ದೆ ಎಂದು ಹೇಳುತ್ತಾರೆ. ಅದಕ್ಕಿಂತ ಮೊದಲೇ ನಾನು ಪ್ರಶ್ನಿಸಿದ್ದೆ ಎಂದು ತೋರಿಸಲು ದಾಖಲೆ ಸಲ್ಲಿಸಿರುತ್ತೇನೆ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.